# ಕರ್ನಾಟಕ ವಿಧಾನ ಪರಿಷತ್

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1137 |
| ಮಾನ್ಯ ಸದಸ್ಯರ ಹೆಸರು | : | ಶ್ರೀ ಯು.ಬಿ. ವೆಂಕಟೇಶ್<br>(ನಾಮನಿರ್ದೇಶನ ಹೊಂದಿದವರು) |
| ಉತ್ತರಿಸಬೇಕಾದ ದಿನಾಂಕ: | : | 30.09.2020 |
| ಉತ್ತರಿಸುವ ಮಾನ್ಯ ಸಚಿವರು | : | ಮಾನ್ಯ ಕೃಷಿ ಸಚಿವರು |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಪ್ರಸ್ತುತ ಜಾರಿಯಲ್ಲಿರುವ ಬೆಳೆ ವಿಮೆ ಯಾವುದು; ಅಧಿಸೂಚಿತ ಬೆಳೆಗಳಿಗೆ ನಿಗಧಿಪಡಿಸಿದ ಪ್ರೀಮಿಯಂ ದರಗಳೇನು; ಬೆಳೆ ವಿಮೆಯ ಪರಿಹಾರ ಪಡೆಯಲು ಬೆಳೆ ಸಮೀಕ್ಷೆಗೆ ಯಾವ ತಂತ್ರಜ್ಞಾನ ಬಳಸಲಾಗಿದೆ; ಇದರಿಂದ ರೈತರಿಗೆ ಉಪಯೋಗವಾಗಿದೆಯೇ; | ರಾಜ್ಯದಲ್ಲಿ ಪ್ರಸ್ತುತ ಕರ್ನಾಟಕ ರೈತ ಸುರಕ್ಷಾ– ಪ್ರಧಾನ ಮಂತ್ರಿ ಫಸಲ್ ಬಿಮಾ ಬೆಳೆ ವಿಮೆ ಯೋಜನೆ ಜಾರಿಯಲ್ಲಿದೆ.<br>ಈ ಯೋಜನೆಯಡಿ 2020–21ನೇ ಸಾಲಿನಲ್ಲಿ ರೈತರು ತುಂಬಬೇಕಾದ ವಿಮಾ ಕಂತಿನ ವಿವರಗಳು ಕೆಳಗಿನಂತಿವೆ:<br>➢ ಮುಂಗಾರು – ವಿಮಾ ಮೊತ್ತದ ಶೇ.2 ರಷ್ಟು – ಅಧಿಸೂಚಿತ ಆಹಾರ ಹಾಗೂ ಎಣ್ಣೆಕಾಳು ಬೆಳೆಗಳಿಗೆ,<br>➢ ಹಿಂಗಾರು & ಬೇಸಿಗೆ – ವಿಮಾ ಮೊತ್ತದ ಶೇ.1.5 ರಷ್ಟು ಅಧಿಸೂಚಿತ ಆಹಾರ ಹಾಗೂ ಎಣ್ಣೆ ಕಾಳು ಬೆಳೆಗಳಿಗೆ,<br>➢ ಅಧಿಸೂಚಿತ ವಾಣಿಜ್ಯ ಮತ್ತು ತೋಟಗಾರಿಕೆ ಬೆಳೆಗಳಿಗೆ ಎಲ್ಲಾ ಹಂಗಾಮಿನಲ್ಲಿ ವಿಮಾ ಮೊತ್ತದ ಶೇ.5 ರಷ್ಟು<br>ಅಧಿಸೂಚಿತ ಬೆಳೆಗಳಿಗೆ ಮುಂಗಾರು ಹಂಗಾಮಿನಲ್ಲಿ ನಿಗಧಿಪಡಿಸಿದ ಪ್ರೀಮಿಯಂ ದರಗಳನ್ನು **ಅನುಬಂಧ–1** ರಲ್ಲಿ ನೀಡಲಾಗಿದೆ.<br>ಬೆಳೆ ವಿಮೆಯ ಪರಿಹಾರ ಪಡೆಯಲು ಬೆಳೆ ಸಮೀಕ್ಷೆ ದತ್ತಾಂಶ ಸಂಗ್ರಹಿಸಲು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಇ–ಆಡಳಿತ) ರವರು ಅಭಿವೃದ್ಧಿ ಪಡಿಸಿರುವ ಮೊಬೈಲ್ ಆಪ್ ಅನ್ನು ಬಳಸಿಕೊಂಡು ತಾಕು ಹಂತದ ಬೆಳೆ ಪರಿಶೀಲನೆ ತಂತ್ರಜ್ಞಾನವನ್ನು ಬಳಸಲಾಗಿದೆ. |

| | | |
|---|---|---|
| | | ಈ ಮಾಹಿತಿಯನ್ನು ಉಪಯೋಗಿಸಿ 2018ರ ಮುಂಗಾರು ಹಂಗಾಮಿನಲ್ಲಿ ನೋಂದಣಿ ಮಾಡಿದ ಬೆಳೆಗಳಿಗೆ ತಾಳೆ ಮಾಡಿ ವಿಮಾ ಪರಿಹಾರ ಇತ್ಯರ್ಥಪಡಿಸಲಾಗುತ್ತಿದೆ. ಇದರಿಂದ 8.28 ಲಕ್ಷ ರೈತರಿಗೆ ಉಪಯೋಗವಾಗಿರುತ್ತದೆ. |
| ಆ) | ಉಪಯೋಗವಾಗಿದ್ದಲ್ಲಿ, ಈವರೆಗೆ ಎಷ್ಟು ರೈತರು ಬೆಳೆ ವಿಮೆಯನ್ನು ಪಡೆದಿದ್ದಾರೆ; ಪರಿಹಾರದ ಮೊತ್ತವೆಷ್ಟು; | ಕರ್ನಾಟಕ ರೈತ ಸುರಕ್ಷಾ ಪ್ರಧಾನ ಮಂತ್ರಿ ಫಸಲ್ ಬೀಮಾ ಯೋಜನೆಯಡಿ ಬೆಳೆ ಸಮೀಕ್ಷೆ ದತ್ತಾಂಶ ಉಪಯೋಗಿಸಿ, 2019-20 ನೇ ಸಾಲಿನ ಮುಂಗಾರು ಹಂಗಾಮಿನಲ್ಲಿ 1.34 ಲಕ್ಷ ರೈತ ಫಲಾನುಭವಿಗಳಿಗೆ ಒಟ್ಟು ರೂ.235.93 ಕೋಟಿಗಳು ಬೆಳೆ ವಿಮೆ ಪರಿಹಾರ ಮೊತ್ತ ಲೆಕ್ಕ ಹಾಕಲಾಗಿದ್ದು, ವಿಮಾ ಸಂಸ್ಥೆಯವರಿಂದ ಬೆಳೆ ವಿಮೆ ಪರಿಹಾರ ಮೊತ್ತ ಇತ್ಯರ್ಥ ಕಾರ್ಯ ಪ್ರಗತಿಯಲ್ಲಿರುತ್ತದೆ.<br><br>KRS-PMFBY ಅಡಿ 2018-19 ಮುಂಗಾರು ಮತ್ತು 2019-20ನೇ ಸಾಲಿನ ಮುಂಗಾರು ಹಂಗಾಮಿನ ಬೆಳೆ ಸಮೀಕ್ಷೆ ವರದಿ ಆಧಾರದ ಮೇಲೆ ಲೆಕ್ಕ ಹಾಕಲಾದ ಬೆಳೆ ವಿಮೆ ಪರಿಹಾರದ ವಿವರ: |

| ವರ್ಷ/ಹಂಗಾಮು | ಫಲಾನುಭವಿಗಳ ಸಂಖ್ಯೆ (ಲಕ್ಷಗಳಲ್ಲಿ) | ಲೆಕ್ಕಹಾಕಲಾದ ಬೆಳೆ ವಿಮೆ ಪರಿಹಾರದ ಮೊತ್ತ (ರೂ. ಲಕ್ಷಗಳಲ್ಲಿ) |
|---|---|---|
| 2018-19 ರ ಮುಂಗಾರು | 8.28 | 160024.91 |
| 2019-20 ರ ಮುಂಗಾರು | 1.34 | 23593.00 |

2019ರ ಮುಂಗಾರು ಹಂಗಾಮಿಗೆ ಸಂಬಂಧಿಸಿದಂತೆ, ಎರಡನೇ ಹಂತದಲ್ಲಿ ಉಳಿದ ಪ್ರಸ್ತಾವನೆಗಳಿಗೆ ದಿನಾಂಕ:11.09.2020 ರಂದು ಕೇಂದ್ರ ಸರ್ಕಾರದಿಂದ ನೀಡಿರುವ ವಿನಾಯಿತಿಗಳನ್ನು ಅಳವಡಿಸಿಕೊಂಡು ಸಂರಕ್ಷಣೆ ತಂತ್ರಾಂಶದಲ್ಲಿ ಬೆಳೆ ನೋಂದಣಿಯಾದ ಪ್ರಸ್ತಾವನೆಗಳೊಂದಿಗೆ ಬೆಳೆ ಸಮೀಕ್ಷೆಯ ದತ್ತಾಂಶವನ್ನು ತಾಳೆ ಮಾಡುವ ಪ್ರಕ್ರಿಯೆ ಜಾರಿಯಲ್ಲಿದ್ದು, ಸದರಿ ಪ್ರಕ್ರಿಯೆಯು ಪೂರ್ಣಗೊಂಡ ಕೂಡಲೇ ಬಾಕಿ ಇರುವ ಪ್ರಸ್ತಾವನೆಗಳಿಗೆ ಕ್ಲೇಮುಗಳನ್ನು ಪ್ರಾರಂಭ ಮಾಡಲಾಗುವುದು.

| | | |
|---|---|---|
| | | ಹಿಂಗಾರು ಹಂಗಾಮಿನ ಬೆಳೆ ಸಮೀಕ್ಷೆಯ ದಾಖಲೆಯ ವಿವರಗಳು ಅಂತಿಮ ಹಂತದ ಕ್ರೋಢೀಕರಣ ಪ್ರಕ್ರಿಯೆ ಜಾರಿಯಲ್ಲಿದ್ದು, ಸದರಿ ದತ್ತಾಂಶವು ಅಂತಿಮಗೊಂಡ ನಂತರ ಸಂರಕ್ಷಣೆ ತಂತ್ರಾಂಶದಲ್ಲಿ ಬೆಳೆ ನೊಂದಣಿಯಾದ ಪ್ರಸ್ತಾವನೆಗಳೊಂದಿಗೆ ತಾಳೆ ಮಾಡಲು ಪರಿಗಣಿಸಲಾಗುವುದು. ನೋಂದಣಿ ಮಾಡಿಸಿದ ರೈತರಿಗೆ ಬೆಳೆ ಕಟಾವು ಪ್ರಯೋಗಗಳ ವರದಿಯ ಆಧಾರದ ಮೇಲೆ ಬೆಳೆ ವಿಮೆ ಪರಿಹಾರವನ್ನು ಸಂರಕ್ಷಣೆ ತಂತ್ರಾಂಶದಲ್ಲಿ ಪ್ರಾರಂಭ ಮಾಡಲಾಗುವುದು. |
| ಇ) | ಇತ್ತೀಚೆಗೆ ಬಿಡುಗಡೆ ಮಾಡಿರುವ ಬೆಳೆ ಸಮೀಕ್ಷಾ ತಂತ್ರಜ್ಞಾನವು ರೈತ ಸ್ನೇಹಿಯಾಗಿದೆಯೇ; ಹಾಗಿದ್ದಲ್ಲಿ, ಬೆಳೆ ಸಮೀಕ್ಷಾ ತಂತ್ರಜ್ಞಾನವನ್ನು ಬಳಸಲಾಗದ ರೈತರಿಗೆ ಸ್ಥಳೀಯವಾಗಿ ತರಬೇತಿಯನ್ನು ನೀಡಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು; | ಇತ್ತೀಚೆಗೆ ಬಿಡುಗಡೆ ಮಾಡಿರುವ ಬೆಳೆ ಸಮೀಕ್ಷಾ ತಂತ್ರಜ್ಞಾನವು ರೈತ ಸ್ನೇಹಿಯಾಗಿರುತ್ತದೆ.<br>"ಬೆಳೆ ಸಮೀಕ್ಷೆ ತಂತ್ರಜ್ಞಾನವನ್ನು ಬಳಸಲಾಗದ ರೈತರಿಗೆ ಸ್ಥಳೀಯವಾಗಿ ತರಬೇತಿಯನ್ನು ಆಯಾ ಗ್ರಾಮದಲ್ಲಿ ಲಭ್ಯವಿರುವ ಮಾಹಿತಿ ತಂತ್ರಜ್ಞಾನದ ಬಗ್ಗೆ ತಿಳುವಳಿಕೆ ಇರುವ ಯುವಕರ (ಖಾಸಗಿ ನಿವಾಸಿಗಳು) ಮತ್ತು ಸ್ಥಳೀಯ ಅಧಿಕಾರಿಗಳ ಮೂಲಕ ನೀಡಲಾಗಿದೆ. ಮುಂದುವರೆದು, ಬೆಳೆ ಸಮೀಕ್ಷೆ ಕಾರ್ಯಕ್ರಮದಲ್ಲಿ ತೊಡಗಿರುವ ಎಲ್ಲಾ ಅಧಿಕಾರಿ/ಸಿಬ್ಬಂದಿ ವರ್ಗದವರಿಗೆ, ಆಯಾ ಜಿಲ್ಲೆ/ತಾಲ್ಲೂಕು/ಹೋಬಳಿ/ಗ್ರಾಮಗಳಲ್ಲಿ ಬೆಳೆಯುವ ಎಲ್ಲಾ ಬೆಳೆಗಳ ಕುರಿತಾಗಿ ಮತ್ತು ಆಪ್ ಕುರಿತು ಅಗತ್ಯ ತರಬೇತಿಯನ್ನು ಸಂಪನ್ಮೂಲ ವ್ಯಕ್ತಿಗಳ ಮೂಲಕ ಜನಪ್ರತಿನಿಧಿಗಳನ್ನೊಳಗೊಂಡಂತೆ ಪ್ರಚಾರ ಮೂಲಕ ಹಮ್ಮಿಕೊಳ್ಳಲಾಗಿರುತ್ತದೆ." |
| ಈ) | ಮೊಬೈಲ್ ಬಳಕೆ ಮಾಡದ ರೈತರ ಬೆಳೆ ಸಮೀಕ್ಷೆ ಮಾಡಲು ಸರ್ಕಾರ ಕೈಗೊಂಡ ಕ್ರಮಗಳೇನು; ಬೆಳೆ ಸಮೀಕ್ಷೆಯಲ್ಲಿ ಲೋಪ-ದೋಷವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? (ಜಿಲ್ಲಾವಾರು ವರದಿ ನೀಡುವುದು) | ರೈತರೇ ಸ್ವತಃ ಬಳಸಲು ಹಾಗೂ ಮೊಬೈಲ್ ಬಳಕೆ ಮಾಡದ ರೈತರ ಬೆಳೆ ಸಮೀಕ್ಷೆ ಮಾಡಲು ರೈತರ ಪರವಾಗಿ ಅವರ ಕುಟುಂಬದವರು/ನೆರೆಹೊರೆಯವರು/ಸ್ನೇಹಿತರು/ಆಯಾ ಗ್ರಾಮದಲ್ಲಿ ಲಭ್ಯವಿರುವ ಮಾಹಿತಿ ತಂತ್ರಜ್ಞಾನದ ಬಗ್ಗೆ ತಿಳುವಳಿಕೆ ಇರುವ ಯುವಕರ (ಖಾಸಗಿ ನಿವಾಸಿಗಳು)/ಅಧಿಕಾರಿಗಳ ಮೂಲಕ ಬೆಳೆ ಸಮೀಕ್ಷೆ ಕೈಗೊಳ್ಳಲು ಸರ್ಕಾರ ಕ್ರಮ ಕೈಗೊಂಡಿರುತ್ತದೆ.<br>ಹಿಂದಿನ ವರ್ಷಗಳಲ್ಲಿ ಖಾಸಗಿ ನಿವಾಸಿಗಳ ಮೂಲಕ ಬೆಳೆ ಸಮೀಕ್ಷೆ ವಿವರಗಳನ್ನು ದಾಖಲಿಸುವ ಸಮಯದಲ್ಲಿ ಪ್ರಸಕ್ತ ಸರ್ವೆ ನಂಬರ್ ವಾರು |

| | | |
|---|---|---|
| | | ಮತ್ತು ಹಿಸ್ಸಾವಾರು ಡಿಜಿಟೈಸ್ಡ್ ನಕ್ಷೆಗಳು ಲಭ್ಯವಿಲ್ಲದ ಕಾರಣ ಒಂದು ಸರ್ವೇ ನಂಬರ್ ನಲ್ಲಿ ಹಲವಾರು ಹಿಸ್ಸಾಗಳು ಇರುವ ಕಡೆ ದಾಖಲಾದ ಬೆಳೆ ವಿವರಗಳು ತಾಳೆಯಾಗುತ್ತಿರಲಿಲ್ಲ. ಅದರೆ ಪ್ರಸ್ತುತ ವರ್ಷದಿಂದ ಬೆಳೆ ಸಮೀಕ್ಷೆಯಲ್ಲಿ ದಾಖಲಾಗುತ್ತಿರುವ ಮಾಹಿತಿಯು ನಿಖರವಾಗಿ ಬರುವ ನಿಟ್ಟಿನಲ್ಲಿ ಈ ಕೆಳಕಂಡ ಕ್ರಮಗಳನ್ನುಕೈಗೊಳ್ಳಲಾಗಿದೆ.<br><br>ಅ) ಹೆಚ್ಚಿನ ಸಂಖ್ಯೆಯಲ್ಲಿ ರೈತರೇ ಸ್ವತಃ ಭಾಗವಹಿಸಿ ವಿವರಗಳನ್ನು ನಮೂದಿಸುವುದರಿಂದ ವ್ಯತ್ಯಾಸಗಳು ಕಡಿಮೆಯಾಗಿ ರೈತರ ಸಬಲೀಕರಣವಾಗುವುದಕ್ಕೆ ಒತ್ತು ನೀಡಲಾಗಿರುತ್ತದೆ. (ಇದಕ್ಕಾಗಿ ಪ್ರತ್ಯೇಕವಾಗಿ ರೈತರ ಮೊಬೈಲ್ ಅಪ್ ಬಿಡುಗಡೆಗೊಳಿಸಲಾಗಿರುತ್ತದೆ)<br><br>ಆ) ಬೆಳೆ ಸಮೀಕ್ಷೆ ಕುರಿತು ಎಲ್ಲಾ ಮೂಲಗಳಿಂದ ಹೆಚ್ಚಿನ ಪ್ರಚಾರವನ್ನು ನೀಡಲಾಗುತ್ತಿದೆ ಜನಪ್ರತಿನಿಧಿಗಳು ಸಹ ಬೆಳೆ ಸಮೀಕ್ಷೆ ಕಾರ್ಯದಲ್ಲಿ ಬಾಗವಹಿಸಿರುತ್ತಾರೆ.<br><br>ಇ) ಬೆಳೆ ಸಮೀಕ್ಷೆ ಕಾರ್ಯಕ್ರಮದಲ್ಲಿ ತೊಡಗಿಸಿಕೊಂಡಿರುವ ಎಲ್ಲಾ ಅಧಿಕಾರಿ/ಸಿಬ್ಬಂದಿ ವರ್ಗದವರಿಗೆ, ಆಯಾ ಜಿಲ್ಲೆ/ತಾಲ್ಲೂಕು/ಹೋಬಳಿ/ಗ್ರಾಮಗಳಲ್ಲಿ ಬೆಳೆಯುವ ಎಲ್ಲಾ ಬೆಳೆಗಳ ಕುರಿತಾಗಿ ಅಗತ್ಯ ತರಬೇತಿಯನ್ನು ಸಂಪನ್ಮೂಲ ವ್ಯಕ್ತಿಗಳ ಮೂಲಕ ಹಮ್ಮಿಕೊಳ್ಳಲಾಗಿರುತ್ತದೆ.<br><br>ಈ) ವಿವಿಧ ಹಂತಗಳ ಅಧಿಕಾರಿಗಳಿಂದ ಮೇಲ್ವಿಚಾರಣೆ ಮತ್ತು ಉಸ್ತುವಾರಿಯನ್ನು ಪರಿಣಾಮಕಾರಿಯಾಗಿ ಮಾಡಲಾಗುತ್ತಿದೆ.<br><br>ಉ) ಈ ಎಲ್ಲಾ ಕ್ರಮಗಳ ಜೊತೆಗೆ ಸಮೀಕ್ಷೆಯಲ್ಲಿ ಉಂಟಾಗುವ ವ್ಯತ್ಯಾಸಗಳನ್ನು ಸರಿಪಡಿಸಿಕೊಳ್ಳಲು ಬೆಳೆ ದರ್ಶಕ್ ಆಪ್ ಮೂಲಕ ರೈತರು ಆಕ್ಷೇಪಣೆಗಳನ್ನು ಸಲ್ಲಿಸಿ ಮರು ಸಮಿಕ್ಷೆಯ ಮೂಲಕ ತಪ್ಪುಗಳನ್ನು ಸರಿಪಡಿಸಿಕೊಳ್ಳಲು ಅವಕಾಶವನ್ನು ಸಹ ಕಲ್ಪಿಸಿದೆ. |

| | | |
|---|---|---|
| | | ಊ) ನಿಖರವಾದ ಮಾಹಿತಿ ಸಂಗ್ರಹಿಸಲು ಜಿ.ಪಿ.ಎಸ್ ಆಧಾರಿತ ಸಮೀಕ್ಷೆಯನ್ನು ನಡೆಸುತ್ತಿರುವ ಜೊತೆಗೆ, ರೈತರ, ಸಮೀಕ್ಷೆದಾರರ, ಅನುಮೋದಿಸುವವರ ಮತ್ತು ಗುಣನಿಯಂತ್ರಣ ಅಧಿಕಾರಿಗಳ ಸಂಪೂರ್ಣ ವಿವರಗಳನ್ನು ಸೆರೆಹಿಡಿಯುವುದು ಮತ್ತು ಉಸ್ತುವಾರಿಯನ್ನು ಮಾಡಲಾಗುತ್ತಿದೆ.<br><br>ಹೌದು, ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಜಿಲ್ಲಾವಾರು ವಿವರಗಳನ್ನು **ಅನುಬಂಧ-2** ರಲ್ಲಿ ನೀಡಲಾಗಿದೆ. |

**ಸಂಖ್ಯೆ:- ಕೃಇ/124/ಕೃಕೈಉ/2020**

(ಬಿ.ಸಿ.ಪಾಟೀಲ್)
**ಕೃಷಿ ಸಚಿವರು**